**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ.**

**ಸಿ.ಸಿ ನಂ. 153/2023**

**ಪ್ರಾಸಾ-01**

**ಚಾಸಾ- 01**

**ದಿನಾಂಕಃ 04-07-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | |
|---|---|
| ಹೆಸರು | ಃ ತಮ್ಮಣ್ಣ ತಂಃ ಬಸವಣೆಪ್ಪ ಮಲ್ಲಣ್ಣನವರ |
| ವಯಸ್ಸು | ಃ 58 ವರ್ಷ |
| ಉದ್ಯೋಗ | ಃ ಅಬಕಾರಿ ಉಪ ನಿರೀಕ್ಷಕರು,ಆನಮೋಡ ತನಿಖಾ ಠಾಣೆ |
| ವಾಸ | ಃ ದಾಂಡೇಲಿ. |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

ನಾನು ದಿಃ 23-02-2022 ರಿಂದ 23-12-2022 ರವರೆಗೆ ನಿಯೋಜನೆ ಮೇರೆಗೆ ಆನಮೋಡ ಅಬಕಾರಿ ಠಾಣೆ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 17-12-2022 ರಂದು ಆನಮೋಡ ತನಿಖಾ ಠಾಣಾಯಲ್ಲಿ ಕರ್ತವ್ಯದಲ್ಲಿದಾಗ ಬೆಳಿಗ್ಗೆ 12.15 ಕ್ಕೆ ಗೋವಾ ಕಡೆಯಿಂದ ಒಂದು ಅಶೋಕ ಲೈಲ್ಯಾಂಡ ಮಿನಿ ಟ್ರಕ ವಾಹನ ನಂ. ಜಿಎ-05-ಟಿ.- 5095 ಬಂದಿತು. ಸದರಿ ವಾಹನವನ್ನು ತಡೆದು ನಿಲ್ಲಿಸಿದ್ದೇವು. ಆ ಸಮಯದಲ್ಲಿ ನ್ಯಾಯಾಲಯದ ಅನುಮತಿ ಪಡೆಯಲು ಮತ್ತು ಪಂಚರನ್ನು ಹುಡುಕಲು ಸಾಧ್ಯವಾಗದ ಕಾರಣ ಕಲಂ 54 ರ ಅಡಿಯಲ್ಲಿ ಶೋಧನಾ ಸಮುಚ್ಚಿತ ವಾರೆಂಟನ್ನು ತಯಾರಿಸಿ, ನಮ್ಮ ಇಲಾಖೆಯ ದಿನಗೂಲಿ ನೌಕರರಾದ ಚಾಸಾ 3 ಮತ್ತು 4 ರವರನ್ನು ಪಂಚರಾಗುವಂತೆ ಆದೇಶಿಸಿ, ನಮ್ಮೆಲ್ಲಾರ ನನ್ನ , ಚಾಸಾ. 3 ರಿಂದ 6 ರವರ ಅಂಗ ಜಪ್ತಿ ಮಾಡಿ, ಸದರಿ ಮಿನಿ ಟ್ರಕನ್ನು ಪರಿಶೀಲನೆ ಮಾಡಲು ಹೋದೆವು. ಆಗ ಸದರಿ ವಾಹನದ ಡಿಕ್ಕಿಯಲ್ಲಿ ರಟ್ಟಿನ ಪೆಟ್ಟಿಗೆಗಳು

ಇದ್ದದ್ದು ಕಂಡು ಬಂದವು. ಅವುಗಳನ್ನು ಕೆಳಗೆ ಇಳಿಸಿ, ತೆಗೆದು ನೋಡಿದಾಗ, ಗೋವಾದಲ್ಲಿ ತಯಾರಿಸಿದ

3. 750 ಎಂ.ಎಲ್‌ನ ರಾಯಲ್ ಸ್ಟ್ಯಾಗ್ಸ ವಿಸ್ಕಿಯ 24 ಬಾಟಲಿಗಳು

4. 750 ಎಂ.ಎಲ್‌ನ MH ಬ್ರಾಂಡಿ 12 ಬಾಟಲಿಗಳು

5. 2 ಲೀಟರನ ರಾಯಲ್ ಸ್ಟ್ಯಾಗ್ಸ ವಿಸ್ಕಿಯ 10 ಬಾಟಲಿಗಳು

6. 2 ಲೀಟರನ ಇಂಪಿರಿಯಲ್ ಬ್ಲ್ಯೂ ವಿಸ್ಕಿಯ 5 ಬಾಟಲಿಗಳು ಇದ್ದವು.

7. ನಂತರ ನಾವು ಸದರಿ ವಾಹನದ ಚಾಲಕನನ್ನು ವಿಚಾರಿಸಿದಾಗ, ತನ್ನ ಹೆಸರು ಶಿವಾನಂದ ಲಿಂಗಪ್ಪ ಮೆಟ್ಟಿನ ಸಾಃ ಕಲ್ಲೂರು, ತಾಃ ಧಾರವಾಡ, ಜಿಃ ಧಾರವಾಡ ಎಂದು ಹೇಳಿದನು. ಮುಂದುವರೆದು ಸದರಿ ಚಾಲಕನು ತನ್ನ ಹತ್ತಿರ ಸದರಿ ಮದ್ಯವನ್ನು ಸಾಗಾಟ ಮಾಡಲು ಅನುಮತಿ ಅಥವಾ ಪರವಾನಿಗೆ ಇಲ್ಲ ಎಂದು ಹೇಳಿದನು. ಸದರಿ ವ್ಯಕ್ತಿಗೆ ಅಪರಾಧದ ಬಗ್ಗೆ ಮಾಹಿತಿ ನೀಡಿ, ಅವನನ್ನು ದಸ್ತಗಿರಿ ಕ್ರಮವನ್ನು ಜರುಗಿಸಿ, ದಸ್ತಗಿರಿ ಮಾಡಿದೇನು.

8. ನಂತರ ಸ್ಥಳದಲ್ಲಿ 750 ಎಂ.ಎಲ್‌ನ ರಾಯಲ್ ಸ್ಟ್ಯಾಗ್ಸ ವಿಸ್ಕಿಯ 2 ಬಾಟಲಿಗಳು , 750 ಎಂ.ಎಲ್‌ನ MH ಬ್ರಾಂಡಿ 1 ಬಾಟಲಿ, 2 ಲೀಟರನ ರಾಯಲ್ ಸ್ಟ್ಯಾಗ್ಸ ವಿಸ್ಕಿಯ 1 ಬಾಟಲಿ, 2 ಲೀಟರನ ಇಂಪಿರಿಯಲ್ ಬ್ಲ್ಯೂ ವಿಸ್ಕಿಯ 1 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಬಿಳಿ ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಿ ಸೀಲ್ ಮಾಡಲಾಯಿತು. ನಂತರ ಚೀಟಿಯನ್ನು ಅಂಟಿಸಲಾಯಿತು.

9. ಚಾಲಕನನ್ನು ದಸ್ತಗಿರಿ ಮಾಡಿ, ಬೆಳಿಗ್ಗೆ 12.15 ರಿಂದ 3.30 ರವೆರೆಗೆ ಪಂಚನಾಮೆ ತಯಾರಿಸಿ, ಎಲ್ಲಾ ಮದ್ಯವನ್ನು ಜಪ್ತು ಮಾಡಿ, ಆರೋಪಿಯನ್ನು ಮತ್ತು ವಾಹನವನ್ನು ತಾಬಾಕ್ಕೆ ತೆಗೆದುಕೊಂಡು ಠಾಣೆಗೆ ತೆರಳಿ ಅದರೊಂದಿಗೆ ಸರಕಾರದ ವತಿಯಿಂದ ನಾನೇ ದೂರನ್ನು ನೀಡಿರುತ್ತೇನೆ. ನಂತರ ಠಾಣೆಗೆ ಮರಳಿ ಗುನ್ನಾ ಸಂಃ 04/2022-23 ರಂತೆ ಪ್ರಕರಣವನ್ನು

ದಾಖಲಿಸಿರುತ್ತೇನೆ. ತದನಂತರ ಎಲ್ಲಾ ಮದ್ಯವನ್ನು, ಆರೋಪಿಯನ್ನು ಮತ್ತು ವಾಹನವನ್ನು ಮುಂದಿನ ಕ್ರಮಕ್ಕಾಗಿ ಚಾಸಾ. 2 ರವರಿಗೆ ಹಸ್ತಾಂತರಿಸಿರುತ್ತೇನೆ.

10. ಸಾಕ್ಷಿಯು ಶೋಧನಾ ಸಮುಚ್ಚಿತ ವಾರೆಂಟನ್ನು ನೋಡಿ ಗುರುತಿಸಿದ್ದು, ಅದನ್ನು ಈಗ **ನಿಪಿ-1** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1 (ಎ)** ಎಂದು ಗುರುತಿಸಲಾಯಿತು.

11. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗ **ನಿಪಿ-2** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-2 (ಎ)** ಎಂದು ಗುರುತಿಸಲಾಯಿತು.

13. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ **ನಿಪಿ-3** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3 (ಎ)** ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**Sd/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,**
**ದಾಂಡೇಲಿ.**

.